- -                                        ಓ ಎಸ್ ನಂ.  135/2019

ಪಿ.ಡಬ್ಲ್ಯೂ :2

ದಿನಾಂಕ :09-01-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಪಾಟೀ ಸವಾಲುಃ **1** ನೇ ಪ್ರತಿವಾದಿ ಪರ ವಕೀಲರಿಂದಃ

ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ  ಬರೆದಿರುವ ಎಲ್ಲಾ ವಿಚಾರಗಳು ತಿಳಿದಿವೆ . ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ  ದಾವಾ ಸ್ವತ್ತು ಯಾವ ಸ್ಥಳದಲ್ಲಿದೆ , ಅದರ ಸರ್ವೆ ನಂಬರ್ ಏನು ಮತ್ತು ಅದರ ವಿಸ್ತೀರ್ಣ ಏನು ಎಂದು ಬರೆಸಲಾಗಿದೆ . ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ  ಸದರಿ ವಿಚಾರ ಬರೆಸಿಲ್ಲ , ಆದುದರಿಂದ ನನಗೆ ದಾವಾ ಸ್ವತ್ತಿನ ಬಗ್ಗೆ ಯಾವುದೇ ವಿಚಾರ ತಿಳಿದಿಲ್ಲ ಎಂದರೆ ಸರಿಯಲ್ಲ . ದಾವಾ ಸ್ವತ್ತು ಕಾಳಮ್ಮ ಎಂಬುವವರಿಗೆ ಸೇರಿತ್ತು ಎಂಬುದರ ಬಗ್ಗೆ ನಾನು ದಾಖಲೆಯನ್ನು ನೋಡಿದ್ದೇನೆ . ದಾವಾ ಸ್ವತ್ತು ಕಾಳಮ್ಮ  ರವರಿಗೆ ಸೇರಿದ ಸ್ವತ್ತಲ್ಲ  ಎಂದರೆ ಸರಿಯಲ್ಲ . ಕಾಳಮ್ಮ ರವರು ನಮ್ಮ ಗ್ರಾಮದವರು, ನಮ್ಮ ಸಂಬಂಧಿಕರಲ್ಲ,  ನಮ್ಮ ಜಮೀನಿನ ಹತ್ತಿರದಲ್ಲಿ ಅವರ ಜಮೀನು ಇತ್ತು  . ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ   ದಾವಾ ಸ್ವತ್ತಿನ ಚಕ್ಕುಬಂದಿ ಬರೆಸಿದ್ದೇನೆ . ದಾವಾ ಸ್ವತ್ತಿನ ಉತ್ತರಕ್ಕೆ ಕಾಳೇಗೌಡರವರ ಸ್ವತ್ತು ಇರುತ್ತದೆ . ದಾವಾ ಸ್ವತ್ತಿನಲ್ಲಿ ಕಾಳಮ್ಮರವರಾಗಲಿ , ಅವರ ಕುಟುಂಬದವರಾಗಲೀ ಎಂದೂ ಸಹಾ ಸ್ವಾಧೀನ ಹೊಂದಿರಲಿಲ್ಲ ಎಂದರೆ ಸರಿಯಲ್ಲ.  ದಾವಾ ಸ್ವತ್ತಿನಲ್ಲಿ ವಾದಿಗಳು ಇಂದಿಗೂ ಸಹಾ ಸ್ವಾದೀನ ಹೊಂದಿದ್ದಾರೆಎಂದು ಸುಳ್ಳು ವಿವರಗಳನ್ನು ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ  ಬರೆಸಿದ್ದೇನೆ ಎಂದರೆ ಸರಿಯಲ್ಲ.

ದಾವಾ ಸ್ವತ್ತು ಮೂಲತಃ ರಂಗಮ್ಮ ಕೋಂ ಸಿದ್ದನಂಜೇಗೌಡ ರವರಿಗೆ ಸೇರಿತ್ತು ಎಂದರೆ ಸರಿಯಲ್ಲ.   ದಾವಾ ಸ್ವತ್ತುಗಳ ಎಲ್ಲಾ ರೆವಿನ್ಯೂ ದಾಖಲಾತಿಗಳ ರಂಗಮ್ಮ ರವರ ಹೆಸರಿನಲ್ಲಿದ್ದವು ಎಂದರೆ ಸರಿಯಲ್ಲ.  ರಂಗಮ್ಮ ರವರಿಗೆ 5 ಜನ ಗಂಡು ಮಕ್ಕಳು ಎಂದರೆ ಸಾಕ್ಷಿಯು ರಂಗಮ್ಮ ರವರಿಗೆ  ಮಕ್ಕಳು ಇದ್ದಾರೆ ಆದರೆ ಎಷ್ಟು ಜನ ಮಕ್ಕಳು ಎಂಬುದು ನನಗೆ ಗೊತ್ತಿಲ್ಲ ಎಂದು ತಿಳಿಸಿದ್ದಾರೆ . 1ನೇ ಪ್ರತಿವಾದಿಯ ತಂದೆ ಬಸವೇಗೌಡರವರು ರಂಗಮ್ಮರವರ ಮಗ ಎಂದರೆ ಸರಿ . ಸದರಿ ಬಸವೇಗೌಡರವರಿಗೆ ಕಾಳೇಗೌಡ , ರುದ್ರಣ್ಣ ಮತ್ತು ಈಶ್ವರಯ್ಯ ಎಂಬ ಮೂವರು ಮಕ್ಕಳು ಎಂದರೆ ಸರಿ . ರಂಗಮ್ಮ ರವರು ತಮ್ಮ ಜೀವಿತಾವಧಿಯಲ್ಲಿ ದಾವಾ ಸ್ವತ್ತಿನ ಅನುಭವ ಹೊಂದಿದ್ದರು , ಅವರ ಮರಣಾ ನಂತರ ಅವರ 5 ಜನ ಮಕ್ಕಳು ಸ್ವಾಧೀನ ಹೊಂದಿ ಅನುಭವಿಸಿಕೊಂಡು

ಬರುತ್ತಿದ್ದರು ಎಂದರೆ ಸರಿಯಲ್ಲ. ಸದರಿ 5 ಜನರು ಸೇರಿ ಕುಟುಂಬದ ಸ್ವತ್ತುಗಳನ್ನು ವಿಭಾಗಿಸಿಕೊಂಡಾಗ ದಾವಾ ಸ್ವತ್ತು ಬಸವೇಗೌಡರವರ ಭಾಗಕ್ಕೆ ಬಂದಿದೆ ಎಂದರೆ ಸರಿಯಲ್ಲ. ಆ ನಂತರ ಬಸವೇಗೌಡ ಮತ್ತು ಅವರ ಮಕ್ಕಳು ದಾವಾ ಸ್ವತ್ತನ್ನು ಅನುಭವಿಸಿಕೊಂಡು ಬರುತ್ತಿದ್ದರು ಎಂದರೆ ಸರಿಯಲ್ಲ. ಬಸವೇಗೌಡರವರ ಮರಣ ನಂತರ ಅವರ ಮಕ್ಕಳು ಕುಟುಂಬದ ಸ್ವತ್ತುಗಳನ್ನು ವಿಭಾಗಿಸಿಕೊಂಡಾಗ ದಾವಾ ಸ್ವತ್ತು 1 ನೇ ಪ್ರತಿವಾದಿಯ ಭಾಗಕ್ಕೆ ಬಂದಿದೆ ಎಂದರೆ ಸರಿಯಲ್ಲ. ಸದರಿ ವಿಭಾಗದ ಪ್ರಕಾರ ದಾವಾ ಸ್ವತ್ತಿನ ಖಾತೆ ಮತ್ತು ಪಹಣಿ 1 ನೇ ಪ್ರತಿವಾದಿಯ ಹೆಸರಿಗೆ ಬಂದಿದೆ ಎಂದು ಸಾಕ್ಷಿಯು ಅವರು ಏನು ದಾಖಲೆ ಮಾಡಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದು ತಿಳಿಸಿದ್ದಾರೆ . ಸುಮಾರು 30 ವರ್ಷಗಳಿಂದಲೂ ದಾವಾ ಸ್ವತ್ತಿನ ಖಾತೆ ಮತ್ತು ಪಹಣಿ 1 ನೇ ಪ್ರತಿವಾದಿಯ ಹೆಸರಿನಲ್ಲಿದೆ ಎಂದರೆ ಸಾಕ್ಷಿಯು ವಾದಿಗಳೆ ದಾವಾ ಸ್ವತ್ತಿನ ಅನುಭವದಲ್ಲಿದ್ದಾರೆ , ಇವರು ಏನು ದಾಖಲೆಗಳನ್ನು ಮಾಡಿಕೊಂಡಿದ್ದಾರೋ ನನಗೆ ಗೊತ್ತಿಲ್ಲ ಎಂದು ತಿಳಿಸಿದ್ದಾರೆ . ದಾವಾ ಸ್ವತ್ತು ವಾದಿಗಳ ಕುಟುಂಬಕ್ಕೆ ಸೇರಿಲ್ಲ ಮತ್ತು ಎಂದೂ ಸಹಾ ಅದರಲ್ಲಿ ಸ್ವಾಧೀನ ಹೊಂದಿಲ್ಲ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನಲ್ಲಿ ಭಾಗಶಃ ಸ್ವತ್ತು ಹೇಮಾವತಿ ಚಾನಲ್ ಗೆಂದು ಭೂಸ್ವಾದೀನಗೊಂಡಿದ್ದು ಅದರ ಪರಿಹಾರದ ಹಣವನ್ನು 1 ನೇ ಪ್ರತಿವಾದಿ ಪಡೆದಿದ್ದಾರೆ ಎಂದರೆ ಪಡೆದಿರಬಹುದು ನನಗೆ ಗೊತ್ತಿಲ್ಲ, ವಾದಿಗಳೇ ಸ್ವತ್ತಿನ ಸ್ವಧೀನದಲ್ಲಿದ್ದಾರೆ . ನಾನು ಮತ್ತು ವಾದಿಗಳು ಹತ್ತಿರದ ಸಂಬಂಧಿಕರು ಎಂದರೆ ಸರಿಯಲ್ಲ . ಒಂದೇ ಪಂಗಡದವರು ಎಂದರೆ ಸರಿ . ನನ್ನ ಮತ್ತು ವಾದಿಗಳ ನಡುವೆ ಕೊಡುವ ಮತ್ತು ತೆಗೆದುಕೊಳ್ಳುವ ಹಲವಾರು ವ್ಯವಹಾರಗಳು ಇವೆ ಎಂದರೆ ಸರಿಯಲ್ಲ . ದಾವಾ ಸ್ವತ್ತಿನ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹಾ ವಾದಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ, ಕೇಳಿದೆ, ಸರಿ ಇದೆ, ಎಂದರು.

Sd/-
(ಅನುಪಮ.ಡಿ. )
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಗುಬ್ಬಿ .